## ನೆನಪುಗಳು.....

(...4ನೇ ಪುಟದಿಂದ)

ರಾತ್ರಿ ಹೋದರೆ ವಾಪಾಸು ಬರುವಾಗ ಬೆಳಕು ಹರಿದಿರುತ್ತಿತ್ತು. ಹೀಗೆ 1964ರಲ್ಲಿ ಜನಸೇವೆ ಆರಂಭಿಸಿದ ಅವರು ತಾನು ಇಹಲೋಕವನ್ನು ತ್ಯಜಿಸಿ ಹೋಗುವ ಹಿಂದಿನ ದಿನದ ತನಕವೂ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದರು.

ನನ್ನ ಒಂದೂವರೆ ವರ್ಷದ ಮಗ ಅಪ್ಪಾ ಎಂದು ನನ್ನನ್ನು ಕರೆಯುವಾಗ ನನಗೆ ನನ್ನ ಅಪ್ಪನದ್ದೇ ನೆನಪಾಗುತ್ತದೆ. ಎಲ್ಲಾ ತಂದೆಯಂದಿರಂತೆ ತನ್ನ ಮಕ್ಕಳ ಭವಿಷ್ಯಕ್ಕೆ ತನ್ನನ್ನು ಮೀಸಲಿಟ್ಟವರು ಅವರು. ಮಕ್ಕಳ ನಂತರ ಅಣ್ಣ-ತಮ್ಮಂದಿರು ಅವರ ಮಕ್ಕಳೂ ಬಂಧು-ಬಾಂಧವರು ಅದರಲ್ಲೂ ಸ್ಥಾನಿಕ ಸಮಾಜ ಬಾಂಧವರು, ಹೀಗೆ ಅವರ ಪ್ರೀತಿ ಪಾತ್ರರ ಪಟ್ಟಿ ಬೆಳೆಯುತ್ತದೆ. ಅವರಿಗಾಗಿ ತನ್ನ ಸ್ವಹಿತವನ್ನು ಬಲಿಕೊಟ್ಟು ಹಗಲಿರುಳು ದುಡಿದವರು. ತನ್ನ ಕೈ ಹಿಡಿದವಳ ಇಷ್ಟಗಳನ್ನೂ ಕಡೆಗಾಣಿಸಿಯಾರೆಂದರೆ ತಪ್ಪಿಲ್ಲ. ವಿದ್ಯಾಭ್ಯಾಸಕ್ಕೆಂದು ಸಹಾಯ ಕೇಳಿ ಬಂದವರಿಗೆ ಇಲ್ಲವೆಂದುದೇ ಇಲ್ಲ. ಹಾಗೆಯೇ ಸಂಘ ಸಂಸ್ಥೆಗಳಿಗೆ ದೇಣಿಗೆ ಕೇಳಿದವರಿಗೆ ಕಿಸೆಯಲ್ಲಿದ್ದುದೆಲ್ಲವನ್ನು ಕೊಟ್ಟು ನನ್ನಲ್ಲಿ ಇಷ್ಟು ಮಾತ್ರ ಉಳಿಯಿತು ಎಂದು ಅಮ್ಮನಲ್ಲಿ ಹೇಳುತ್ತಿದ್ದುದನ್ನು ನಾನು ಹಲವು ಬಾರಿ ಕೇಳಿಸಿಕೊಂಡಿದ್ದೇನೆ. ಸರಕಾರಿ ಕೆಲಸದ ಅಲ್ಪ ಸಂಬಳದಲ್ಲಿ ಹಾಗೂ ಪ್ರಾಕ್ಟೀಸಿನಿಂದ ಬಂದ ಹಣದಲ್ಲಿ ಹಂಚುವವರಿಗೆಲ್ಲಾ ಹಂಚಿ, ಕೊನೆಗೆ ಉಳಿದುದರಲ್ಲಿ ಅವರೊಂದು ಸ್ಥಳ ಕೊಂಡುಕೊಂಡು, ಮನೆಕಟ್ಟಿ, ಮಗಳ ಮದುವೆ ಮಾಡಿ, ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸ ಕೊಡಿಸಿದ್ದು ಸಾಹಸವೇ ಸರಿ.

'ಕಾಯಕವೇ ಕೈಲಾಸ' ಎಂದು ನಂಬಿದವರು ನಮ್ಮ ತಂದೆ. ತಾನು ಕೊಂಡಿದ್ದ ಜಮೀನಿನಲ್ಲಿ ರೈತನೊಬ್ಬನಿಗಿಂತಲೂ ಹೆಚ್ಚಾಗಿ ಬೆರತು ಹೋಗಿದ್ದರೆಂದರೆ ಅದು ನನಗೆ ಅತಿಶಯೋಕ್ತಿಯೆನಿಸುವುದಿಲ್ಲ. ಸ್ವತಃ ವೈದ್ಯನಾಗಿದ್ದರೂ ನಮ್ಮ ಮನೆ ಕಟ್ಟುವ ಸಮಯದಲ್ಲಿ ಕೆಲಸದಾಳುಗಳಿಗೆ ಹೆಗಲಿಗೆ ಹೆಗಲು ಕೊಟ್ಟು ಕೈಕೆಸರಾಗುವಂತೆ ದುಡಿಯುತ್ತಿದ್ದುದು ನನಗೆ ನೆನಪಿದೆ. ಮನೆಯ ಮುಂದಿದ್ದ ಹಳೆಯ ಮಣ್ಣಿನ ಪಾಗಾರವನ್ನು ನಾನು, ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ಮಗ ಸೇರಿ ಕಟ್ಟಿದ್ದೇವೆಂದರೆ ಯಾರಾದರೂ ನಂಬುತ್ತೀರಾ? ತೋಟದಲ್ಲಿದ್ದ ಗಿಡಗಳನ್ನು ಸ್ವತಃ ತಾನೇ ಗುಂಡಿತೋಡಿ, ನೆಟ್ಟು, ನೀರು ಹಾಕಿ ಬೆಳೆಸಿದ್ದರು. ತಾನು ಸಾಕಿದ್ದ ಹಸುಗಳ ಮೇಲೆ, ಮಕ್ಕಳ ಮೇಲೆ ತೋರಿಸಿದಷ್ಟೇ ಪ್ರೀತಿ ತೋರುತ್ತಿದ್ದರು. ಅವುಗಳಂತೂ ಅಪ್ಪನ ಸ್ವರ ಕೇಳಿದೊಡಗೆ ಹಟ್ಟಿಯಿಂದಲೇ ಅವರನ್ನು ಕೂಗಿ ಕರೆಯುತ್ತಿದ್ದವು. ಇತ್ತೀಚೆಗೆ ನಮ್ಮ ಜಾಗದ ಅನುಪಯುಕ್ತ ಪಾರ್ಶ್ವದಲ್ಲಿ ಬೆಳೆದ ಕಾಡು ಮರಗಳನ್ನು ತೋಟ ಮಾಡುವ ಉದ್ದೇಶದಿಂದ ನಾನು ಕಡಿಸಿ ಸಮತಟ್ಟು ಮಾಡಿಸಿದ ಮೇಲೆ ಹೇಗೆ ಕಾಣುತ್ತಿದೆಯೆಂದು ಅಭಿಪ್ರಾಯ ಕೇಳಿದಾಗ ನನಗೆ ಕಾಡು ವಾಪಾಸು ಮಾಡಿಕೊಡು ಎಂದು ಉತ್ತರ ಇತ್ತಿದ್ದರು.

ಹೀಗೆ ಜೀವಮಾನವಿಡೀ ಈ ಜಗದ ಮೋಹದ ಮಾಯೆಯಲ್ಲಿ ಈಜಾಡುತ್ತಿದ್ದವರು ನಿವೃತ್ತಿಯ ನಂತರ ಆಶ್ಚರ್ಯಕರವಾಗಿ ಬದಲಾದರು. ಮನಸ್ಸು ಆಧ್ಯಾತ್ಮದತ್ತ ಹೊರಳಿತು. ಅದರಲ್ಲೇ ಸಂಪೂರ್ಣವಾಗಿ ತಲ್ಲೀನರಾದರು. ದಿನವಿಡೀ ಆಧ್ಯಾತ್ಮಿಕ ಪುಸ್ತಕಗಳ ಅಧ್ಯಯನ ಹಾಗೂ ಬರವಣಿಗೆಯಲ್ಲಿ ನಿರತರಾದರು. ಮಧ್ಯೆ ಮಧ್ಯೆ ಬಂದ ರೋಗಿಗಳಿಗೆ ಚಿಕಿತ್ಸೆ ನೀಡಿದರು. ಯಾರಾದರೂ ಆಪ್ತರು ಬಂದರೆ ಅವರೊಡನೆ ಆಧ್ಯಾತ್ಮ ವಿಚಾರದಲ್ಲಿ ಚರ್ಚಿಸುತ್ತಿದ್ದರು. ಉತ್ತಮ ಪ್ರತಿಕ್ರಿಯೆ ಸಿಕ್ಕರೆ ಗಂಟೆಗಟ್ಟಲೆ ವಿಚಾರ ವಿನಿಮಯ ಮಾಡುತ್ತಿದ್ದರು. ಎಲ್ಲವೂ ದೈವನಿಯಾಮಕವಾಗಿ ನಡೆಯುವಂತದ್ದು ಹಾಗೂ ಪುನರ್ಜನ್ಮ ಖಂಡಿತ ಇದೆಯೆಂಬ ನಂಬುಗೆ ಹೊಂದಿದ್ದರು. ಸಾವು ಮುಂದಿನ ಹುಟ್ಟಿಗೆ ಮೊದಲ ಹೆಜ್ಜೆ ಎಂದೇ ಪ್ರತಿಪಾದಿಸುತ್ತಿದ್ದರು. ತನ್ನ ವೈದ್ಯಕೀಯ ಜೀವನದಲ್ಲಿ ನೂರಾರು ಸಾವುಗಳನ್ನು ಕಂಡದ್ದೂ ಇದಕ್ಕೆ ಪೂರಕವಾಗಿರಬಹುದು. ಹೀಗೆ ಕೊನೆಗಾಲದಲ್ಲಿ ಆಹಾರ, ನಡೆನುಡಿ, ಮಾತುಕತೆಗಳನ್ನು ಸಂತನಂತೆ ಇತಿಮಿತಿಯಲ್ಲಿ ನಡೆಸುತ್ತಾ ಇಚ್ಛಾಮರಣಿಯಂತೆ ನಿದ್ರೆಯಲ್ಲೇ ಅಂತ್ಯಗೊಂಡರು.

ಅಕಸ್ಮತ್ತಾಗಿ ಸಂಭವಿಸಿದ ನನ್ನ ತಂದೆಯವರ ಸಾವು ನನ್ನನ್ನು ಮತ್ತು ನನ್ನ ಮನೆಯವರನ್ನು ದೃತಿಗೆಡಿಸಿದ್ದು ನಿಜ. ಎಷ್ಟೇ ಕಣ್ಣೀರಿಟ್ಟರು ಅವರು ಹಿಂದೆಬಾರರು. ಆದರೆ ಅವರ ಜೀವನದ ನೆನಪುಗಳು ಅವರು ಸದಾಕಾಲ ನಮ್ಮೊಂದಿಗೆ ಇದ್ದಾರೆ ಎಂಬಂತೆ ಭಾವನೆಯನ್ನು ಹುಟ್ಟಿಸುವುದು. ಒಂದು ವರ್ಷದ ಹಿಂದೆ ನಾನು ಆರಂಭಿಸಿದ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ಅವರ ಕನಸಿನ ಕೂಸು. ಅವರ ತೀರ್ಥರೂಪರ ಹೆಸರಿನಲ್ಲಿ ಒಂದು ಟ್ರಸ್ಟ್ ಆರಂಭಿಸಬೇಕೆಂಬ ಅವರ ಬಹುಕಾಲದ ಆಸೆಯನ್ನು ಪೂರೈಸಿದ ಸಮಾಧಾನ ನನ್ನದು. ನಮ್ಮ ಮೇಲೆ, ನಮ್ಮ ಮಕ್ಕಳ ಮೇಲೆ ಅವರು ತೋರಿಸಿದ ಪ್ರೀತಿಗೆ, ಈ ಪ್ರಪಂಚದಲ್ಲಿ ಈಜಲು ಅವರು ಹೇಳಿಕೊಟ್ಟ ಪಾಠಕ್ಕೆ ನಾವು ಅವರಿಗೆ ಸದಾ ಕೃತಜ್ಞರು. ಪುನರ್ಜನ್ಮ ಅವರು ಹೇಳಿದಂತೆ ಇರುವುದೇ ಆದರೆ ಅವರು ಮತ್ತೊಮ್ಮೆ ನಮ್ಮ ಮನೆಯಲ್ಲಿಯೇ ಹುಟ್ಟಿ ಬರಲೆಂಬುದೇ ನಮ್ಮೆಲ್ಲರ ಹಾರೈಕೆ.

### ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕ ಮೆಮೋರಿಯಲ್ ಟ್ರಸ್ಟ್

ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕ ಮೆಮೋರಿಯಲ್ ಟ್ರಸ್ಟ್, ಇದರ ವತಿಯಿಂದ ದಿ| ಎಲ್ಲೂರು ಚಂದ್ರಶೇಖರ ರಾವ್ ಸ್ಮಾರಕ ವಿದ್ಯಾರ್ಥಿ ವೇತನಕ್ಕಾಗಿ ವೃತ್ತಿಪರ ತಾಂತ್ರಿಕ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಆರ್ಥಿಕವಾಗಿ ದುರ್ಬಲರಾಗಿರುವ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೈಬರಹದ ಅರ್ಜಿಯೊಂದಿಗೆ ಈ ಕೆಳಗಿನ ದಾಖಲೆಗಳನ್ನು ನೀಡಬೇಕು.

- ★ ವೈಯುಕ್ತಿಕ ಮಾಹಿತಿ ವಿವರ (Bio-Data)
- ★ ವ್ಯಾಸಂಗ ಪ್ರಮಾಣ ಪತ್ರ
- ★ ಹಿಂದಿನ ಶೈಕ್ಷಣಿಕ ವರ್ಷದ ಪಬ್ಲಿಕ್/ಸೆಮಿಷ್ಟರ್/ವಾರ್ಷಿಕ/ಪರೀಕ್ಷೆಗಳ ಅಂಕಪಟ್ಟಿಯ ಜೆರಾಕ್ಸ್ ನಕಲು
- ★ ಆದಾಯ ಪ್ರಮಾಣ ಪತ್ರದ ನಕಲು.

**ಅರ್ಜಿಗಳನ್ನು ತಾ.15-09-2008ರೊಳಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿ.**

**ಡಾ| ವೈ. ಸುದರ್ಶನ ರಾವ್**

ಕೆನರಾ ಹೆಲ್ತ್ ಸೆಂಟರ್, ಅಂಜುಮಾನ್ ರಸ್ತೆ, ಸಿಟಿ ಬಸ್ ಸ್ಟ್ಯಾಂಡ್ ಬಳಿ, ಉಡುಪಿ.

**ವೈ. ಬಿ. ರಾವ್-94484 28330**

## ಶ್ರಾದ್ಧದರ್ಶನ

(...2ನೇ ಪುಟದಿಂದ)

ಶ್ರಾದ್ಧಕಾಲದಲ್ಲಿ ಪಿತೃಗಳನ್ನು ಕರೆದುಕೊಂಡು ಬರುವುದು, ಶ್ರಾದ್ಧವಾದ ಮೇಲೆ ಅವರನ್ನು ಕರೆದುಕೊಂಡು ಹೋಗುವುದು ಅವರ ಕೆಲಸ. ಶ್ರಾದ್ಧಕ್ಕೆ ಬರುವಾಗ ವಿಶ್ವೇದೇವರು ಮುಂದಿದ್ದರೆ ಹೋಗುವಾಗ ಹಿಂದಿರುತ್ತಾರೆ. ದುಷ್ಟಶಕ್ತಿಗಳಿಂದ ಪಿತೃಗಳನ್ನು ರಕ್ಷಿಸುವ ಜವಾಬ್ದಾರಿಯೂ ಅವರದೇ. ಆದರೆ ಶ್ರಾದ್ಧವನ್ನು ರಕ್ಷಿಸುವವನು ವಿಷ್ಣು. ಆದುದರಿಂದಲೇ ಶ್ರಾದ್ಧಕಾಲದಲ್ಲಿ ಪಿತೃಗಳ ಜೊತೆಯಲ್ಲಿ ವಿಶ್ವೇದೇವರನ್ನೂ, ವಿಷ್ಣುವನ್ನೂ ಆರಾಧಿಸುವುದು. ಆದರೆ ಶ್ರಾದ್ಧದಲ್ಲಿ ಪಿತೃಗಳೇ ಪ್ರಧಾನ.

ವೃದ್ಧಿಶ್ರಾದ್ಧದಲ್ಲಿ ಪಿತೃಗಳು ನಾಂದೀಮುಖ ರಾಗಿರುತ್ತಾರೆ. ಸತ್ಯ-ವಸು ಎಂಬ ವಿಶ್ವೇದೇವರು ಇಲ್ಲಿ ಉಪಸ್ಥಿತರಾಗುತ್ತಾರೆ. ತಮ್ಮ ಕುಲದಲ್ಲಿ ನಡೆಯುವ ವೃದ್ಧಿಕಾರ್ಯಗಳನ್ನು ಅತ್ಯಂತ ಆನಂದದಿಂದ ಸ್ವಾಗತಿಸುವ ಪಿತೃಗಳನ್ನು ನಾಂದೀಮುಖರೆಂದೇ ಸಂಬೋಧಿಸಲಾಗುತ್ತದೆ.

ಶ್ರಾದ್ಧವನ್ನು ಎರಡು ಉದ್ದೇಶಗಳಿಂದ ಆಚರಿಸಲಾಗುತ್ತದೆ. ಒಂದು-ಪಿತೃಗಳ ಶಾಶ್ವತ ಸದ್ಗತಿಗಾಗಿ, ಎರಡು-ಅವರ ಅನುಗ್ರಹ ಸಂಪಾದನೆಗಾಗಿ. ತಮ್ಮ ಕುಲದ, ಕುಟುಂಬದ ಶ್ರೇಯಸ್ಸನ್ನು ಪಿತೃಗಳು ಬಯಸುತ್ತಾರೆ. ಅದು ಸಫಲವಾಗುವುದು ಅವರ ಸದ್ಗತಿಯ ಮಹಿಮೆಯಿದ್ದರೆ ಮಾತ್ರ. ಶ್ರಾದ್ಧ ಮಾಡದಿದ್ದರೆ ಪಿತೃಗಳ ಮಹಿಮೆ ನಷ್ಟವಾಗುತ್ತದೆ. ಮಹಿಮೆಯ ನಾಶ ಪಿತೃಗಳ ಕ್ರೋಪಕ್ಕೆ ಪರಿಣಾಮವಾಗಿ ಶಾಪಕ್ಕೆ ಕಾರಣವಾಗುತ್ತದೆ. ಇದಕ್ಕೆ ಪಿತೃಶಾಪವೆನ್ನುತ್ತಾರೆ. ಪಿತೃಶಾಪ ಅತಿಘೋರ. ಕುಲಗಳು, ಕುಟುಂಬಗಳು ಅಳಿದು ಹೋಗುವುದಕ್ಕೆ ಪಿತೃಶಾಪವೂ ಕಾರಣ.

ಪಿತೃಗಳು ಶ್ರಾದ್ಧಕಾಲದಲ್ಲಿ ನಿಮಂತ್ರಿತ ಬ್ರಾಹ್ಮಣರ ಮೂಲಕ ಶ್ರಾದ್ಧವನ್ನು ಸ್ವೀಕರಿಸುತ್ತಾರೆ. ಪಿತೃಗಳನ್ನು, ವಿಶ್ವೇದೇವರನ್ನು ಮತ್ತು ವಿಷ್ಣುವನ್ನು ಪ್ರತಿನಿಧಿಸುವ ಬ್ರಾಹ್ಮಣರು ವೇದವೇದಾಂಗ ಪಾರಂಗತರೂ, ಸದಾಚಾರ ಸಂಪನ್ನರೂ, ಶ್ರದ್ಧಾಳುಗಳೂ ಆಗಿರಬೇಕು. ಕೊನೆಯ ಪಕ್ಷ ಗಾಯತ್ರಿ ಜಪವನ್ನು ವಿಧಿವತ್ತಾಗಿ ಮಾಡುವವ ರಾದರೂ ಆಗಿರಬೇಕು. ಇಂಥವರಲ್ಲೇ ಪಿತೃಗಳು ಸಂತೋಷದಿಂದ ಆವಾಹನೆಗೊಳ್ಳುತ್ತಾರೆ. ಬ್ರಾಹ್ಮಣರು, ಅಜ್ಞಾನಿಗಳೋ, ದುರಾಚಾರಿ ಗಳೋ, ಶ್ರದ್ಧಾಹೀನರೋ ಆಗಿದ್ದರೆ ಪಿತೃಗಳು ಅವರಿಂದ ದೂರನಿಲ್ಲುತ್ತಾರೆ. ಇದು ಶ್ರಾದ್ಧದ ನಿಷ್ಫಲತೆಗೆ ಕಾರಣ. ನಿಷ್ಫಲವಷ್ಟೇ ಅಲ್ಲ, ದೋಷಾವಹವೂ ಅಹುದು.

ಪಿತೃಗಳಿಗೆ ಮಡಿ (ಪಾವಿತ್ರ್ಯ ಶೌಚ) ಎಂದರೆ ಬಲು ಪ್ರೀತಿ. ಶ್ರದ್ಧೆಯಷ್ಟೇ ಮಡಿಯನ್ನು ಅವರು ಅಪೇಕ್ಷಿಸುತ್ತಾರೆ. ಆದುದರಿಂದ ಶ್ರಾದ್ಧಕ್ಕೆ ನಿಮಂತ್ರಿತರಾದ ಮತ್ತು ಆಮಂತ್ರಿತರಾದ ಬ್ರಾಹ್ಮಣರು ಶ್ರದ್ಧಾವಂತರಾಗಿಯೂ, ಮಡಿವಂತರಾಗಿಯೂ ಇರಬೇಕಾದುದು ಅನಿವಾರ್ಯ. ಈ ಕಾರಣಕ್ಕಾಗಿಯೇ ಶ್ರಾದ್ಧದಲ್ಲಿ ಹೆಚ್ಚು ಬ್ರಾಹ್ಮಣರನ್ನು ಕರೆಯಬಾರದೆನ್ನುವುದು.

ಶ್ರಾದ್ಧಕ್ಕೆ ಕುತುಪಕಾಲವೇ ಮುಖ್ಯಕಾಲ. ಸುಮಾರು ಅಪರಾಹ್ಣ ಹನ್ನೆರಡುವರೆ ಗಂಟೆಯಿಂದ ಎರಡು ಗಂಟೆಯವರೆಗೆ ಕುತುಪಕಾಲವಿರುತದೆ. ಇಂತಹ ಕಾಲದಲ್ಲೇ ಪಿತೃಗಳು ಪ್ರಸನ್ನರಾಗಿರುತ್ತಾರೆ.

ಶ್ರಾದ್ಧದಲ್ಲಿ ಕ್ಷಣ ಮತ್ತು ಚಟಕವೆಂಬ ಭೇದವಿದೆ. ಪಿತ್ರಾದಿಸ್ಥಾನಗಳಿಗೆ ಬ್ರಾಹ್ಮಣರನ್ನು ನಿಮಂತ್ರಿಸಿ ಮಾಡುವುದು ಕ್ಷಣ ಶ್ರಾದ್ಧ. ಯೋಗ್ಯ ಬ್ರಾಹ್ಮಣರು ಸಿಗದಿದ್ದಲ್ಲಿ ದರ್ಭವಟುವಿನಲ್ಲೇ ಪಿತ್ರಾದಿಗಳನ್ನು ಆವಾಹಿಸಿ ಮಾಡುವುದು ಚಟಕ ಶ್ರಾದ್ಧ. ಕ್ಷಣ ಶ್ರಾದ್ಧಕ್ಕೆ ನಿಮಂತ್ರಿತ ಬ್ರಾಹ್ಮಣರೂ ವೃತಧಾರಿಗಳಾಗಬೇಕು. ಮುಂಚಿನ ರಾತ್ರಿ ಉಪವಾಸವಿದ್ದು ಬ್ರಹ್ಮಚರ್ಯವನ್ನೂ ಪಾಲಿಸಬೇಕು. ಅವರಿಗೆ ಅಶೌಚಾದಿ ಅಯೋಗ್ಯತೆಗಳೂ ಇರಬಾರದು. ತಂದೆ-ಮಗ, ಇಬ್ಬರು ಸೋದರರು, ಪತ್ನೀಹೀನ, ಗರ್ಭಿಣಿಯ ಗಂಡ, ಸಗೋತ್ರ, ಸಪ್ರವರ-ಇವರನ್ನು ಶ್ರಾದ್ಧಕ್ಕೆ ಕರೆಯಬಾರದು. ಅಂಗವಿಕಲರು, ಶತ್ರುಗಳು, ಜೋಯಿಸರು, ವೈದ್ಯರು, ರಾಜಸೇವಕರು, ನರ್ತಕರು, ನಟರು, ನಪುಂಸಕ ಮೊದಲಾದವರು ವರ್ಜ್ಯ.

ಶ್ರಾದ್ಧದಲ್ಲಿ ಕರ್ತೃವು ಪ್ರಾಚೀನಾವೀತಿ ಯಾಗಿರಬೇಕು. ಎಂದರೆ ಆವನು ಜನಿವಾರವನ್ನು ಬಲದಿಂದ ಎಡಕ್ಕೆ ಹಾಕಿಕೊಂಡಿರಬೇಕು. ಬಲದಿಂದ ಎಡಕ್ಕೆ ಪಿತೃಮಾರ್ಗವೆಂದೂ, ಎಡದಿಂದ ಬಲಕ್ಕೆ ದೇವಮಾರ್ಗವೆಂದೂ ಪ್ರಸಿದ್ಧವಾಗಿವೆ. ಯಜ್ಞಾದಿ ಧರ್ಮಕಾರ್ಯ ಗಳಲ್ಲೂ, ಯಜ್ಞದಂತಹ ಭೋಜನದಲ್ಲೂ ಉಪವೀತಿ ಮಾತ್ರವಲ್ಲ ಉಪವೀತದಂತೆ ಉತ್ತರೀಯವನ್ನೂ ಬ್ರಾಹ್ಮಣನಾದವನು ಧರಿಸಬೇಕು. (ಇದನ್ನೇ ಬ್ರಹ್ಮವಸ್ತ್ರವೆಂದೂ ಹೇಳುತ್ತಾರೆ). ಪ್ಯಾಂಟು, ಶರ್ಟ್ ಧರಿಸಿ ಭೋಜನಕ್ಕೆ ಬರುವವರು ಬ್ರಾಹ್ಮಣರಲ್ಲ; ಬ್ರಾಹ್ಮಣ್ಯದ ಕೊಲೆಗಡುಕರು !

ಕರ್ತೃವಿನ ಮನೆಯಲ್ಲೇ ಮಾಡುವ ಶ್ರಾದ್ಧ ಶ್ರೇಷ್ಠವಾದುದು. ತೀರ್ಥಗಳಲ್ಲಿ ಮಾಡುವ ಶ್ರಾದ್ಧಕ್ಕಿಂತ ಎಂಟು ಪಟ್ಟು ಪುಣ್ಯದಾಯಕ ವಾದುದು.

ಶ್ರಾದ್ಧಕಾಲದಲ್ಲಿ ಉಚ್ಚರಿಸುವ ನಾಮ-ಗೋತ್ರಗಳು ಪಿತೃಗಳಿಗೆ ಹವ್ಯ-ಕವ್ಯಗಳನ್ನು ತಲುಪಿಸುತ್ತವೆ. (ಇದು ಸರಿಯಾದ ವಿಳಾಸವಿದ್ದಂತೆ !) ಪಿತೃಗಳೂ ಕರ್ಮಾನುಸಾರ ಜನ್ಮಾಂತರವನ್ನು ಪಡೆದಿದ್ದರೂ ಶ್ರಾದ್ಧವು ಅವರನ್ನು ಸೇರಿಯೇ ಸೇರುತ್ತದೆ. ಪಿತೃಗಳು ದೇವತ್ವವನ್ನು ಪಡೆದಿದ್ದರೆ ಶ್ರಾದ್ಧವು ಅಮೃತ ರೂಪದಲ್ಲಿ ಅವರಿಗೆ ದೊರೆಯುತದೆ. ಗಂಧರ್ವರಾಗಿದ್ದರೆ ಭೋಗ ರೂಪದಿಂದೆ, ಪಶುಗಳಾಗಿದ್ದರೆ ಹುಲ್ಲಿನ ರೂಪದಿಂದ, ನಾಗಗಳಾಗಿದ್ದರೆ ವಾಯು ರೂಪದಿಂದ ಅವರನ್ನು ಸೇರುತ್ತದೆ. ಅರ್ಥಾತ್ ಆಯಾ ಆಹಾರ ರೂಪದಿಂದ ಆಯಾ ಪ್ರಾಣಿಗಳನ್ನು ಶ್ರಾದ್ಧಾನ್ನ ಹೋಗಿ ಸೇರುತದೆ.

ಇಂದಿನ ಸ್ಥಿತಿ-ಗತಿ ಹೇಗಿದೆ ಎಂಬುವುದನ್ನು ಹೇಳದಿರುವುದೇ ಉತ್ತಮವೆಂದು ಅನಿಸುತ್ತದೆ. ಗಾಯತ್ರಿಯನ್ನು ಜಪಮಾಡದ, ತಿಳಿಯದ ಕರ್ತೃ, ಶ್ರಾದ್ಧವನ್ನು ವಿಧಿವತ್ತಾಗಿ ಮಾಡಿಸಲಾರದ ಪುರೋಹಿತ, ಅನಾಚಾರದ ಬ್ರಾಹ್ಮಣರು ಒಟ್ಟಿಗೆ ಸೇರಿ ಶ್ರಾದ್ಧವನ್ನು ಕುಲಗೆಡಿಸುತ್ತಾರೆ. ಕಾಟಾಚಾರದ, ಬೂಟಾಟಿಕೆಯ ಶ್ರಾದ್ಧವನ್ನು ಮಾಡಿದರೂ ದೋಷ; ಶ್ರಾದ್ಧವನ್ನು ಮಾಡದೇ ಇದ್ದರೂ ದೋಷ. ಖರ್ಚುಮಾಡಿ ಪಿತೃಶಾಪಕ್ಕೆ ಗುರಿಯಾಗುವುದಕ್ಕಿಂತ ಬಿಟ್ಟಿಯಾಗಿ ಪಿತೃಶಾಪಕ್ಕೆ ಗುರಿಯಾಗುವುದೇ ಅಗ್ಗವಲ್ಲವೇ? ಶ್ರಾದ್ಧ ಶಾಸ್ತ್ರೀಯವಾದರೆ ಮಾತ್ರ ಪಿತೃ ಪ್ರಸಾದ ದೊರೆಯಬಲ್ಲದು. ಬ್ರಾಹ್ಮಣ್ಯವಿಲ್ಲದ ಬ್ರಾಹ್ಮಣ ಪ್ರಾಣವಿಲ್ಲದ ಕಲೇವರದಂತೆ.

**PRAMOD**
AUTOMOBILES
KARANGALPADY, MANGALORE -575 003.
Ph : 2491723 (0)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. :Ln.K. HARSHA KUMAR

**ರಾಮಾ ಅಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
**ಫೋನ್ : 2454355, ಮೊಬೈಲ್ : 94485 45702**

ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ
